# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)


ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001.
ದೂರವಾಣಿ : 080–2226 5383   ವೆಬ್‌ಸೈಟ್ : www.kiadb.in   ಇ–ಮೇಲ್ : ceoem@kiadb.in


ಸಂಖ್ಯೆ: ಕಕೈಪ್ರಮಂ/ಕೇಂಕ/ಆಡಳಿತ-63(3)/ 4520 /2025-06                ದಿನಾಂಕ: 03.06.2025.

**:: ಸುತ್ತೋಲೆ ::**

ವಿಷಯ: ಮಂಡಳಿಯ ಲೆಕ್ಕ ವಿಭಾಗದ ಕೆಲಸ-ಕಾರ್ಯಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸುವ ಬಗ್ಗೆ.

-o0o-

ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ ಸಭೆ / ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆ / ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಅನುಮೋದನೆಗೊಂಡ ಯೋಜನಾ ಪ್ರವರ್ತಕರು ಮಂಡಳಿಗೆ ಪಾವತಿಸಲಾಗುವ ಮೊಬಲಗು, ಅಂತಿಮ ದರ ವ್ಯತ್ಯಾಸದ ಮೊಬಲಗು, ಶುದ್ಧಕ್ರಯ ಮತ್ತು ಹಕ್ಕು ವರ್ಗಾವಣೆ ಸಂಬಂಧ ಪಾವತಿಸಲಾಗುವ ಮೊಬಲಗು, ಕಾಲಾವಕಾಶ ವಿಸ್ತರಣೆಗಾಗಿ ವಿಧಿಸಲಾಗುವ ದಂಡ ಮೊಬಲಗಿನ ಪಾವತಿ ಹಾಗೂ ಇತರೆ ಪ್ರಕರಣಗಳಲ್ಲಿ ಉದ್ದಿಮೆದಾರರಿಂದ ಹಣ ಪಾವತಿಯಾಗಿ ಪತ್ರ ಸ್ವೀಕೃತಗೊಂಡಿದ್ದಾಗ್ಯೂ, ರಸೀತಿ ನೀಡುವಲ್ಲಿ ತಡವಾಗುತ್ತಿರುವುದು ಕಂಡುಬಂದಿರುತ್ತದೆ.

ಆದುದರಿಂದ, ಲೆಕ್ಕಶಾಖೆಯು ಮಂಡಳಿಯ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣ ಯೋಜನೆಗಳಿಗೆ ಜಮೀನು ಹಂಚಿಕೆ ಮಾಡುವ ಸಂಬಂಧ ಉದ್ದಿಮೆದಾರರು / ಅರ್ಜಿದಾರರು ಮಂಡಳಿಗೆ ಪಾವತಿಸಲಾಗುವ ಮೊತ್ತಕ್ಕೆ ಸಂಬಂಧಿಸಿದಂತೆ ಪತ್ರ ಮೇಲೆ ಸಂಬಂಧಪಟ್ಟ ಶಾಖೆಯ ಅಧಿಕಾರಿಯ ಮೇಲು ಸಹಿಯೊಂದಿಗೆ ಅರ್ಜಿ ಸ್ವೀಕೃತವಾದ ಎರಡು ದಿವಸಗಳ ಒಳಗಾಗಿ ರಸೀತಿಯನ್ನು ನೀಡತಕ್ಕದ್ದು.

ಮುಂದುವರೆದು, ಆಂತರಿಕ ಲೆಕ್ಕ ಪರಿಶೋಧನೆ ಶಾಖೆಗೆ ತಪಾಸಣೆಗಾಗಿ ಸ್ವೀಕೃತವಾಗುವ ಎಲ್ಲಾ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ, ಕಡತ ಸ್ವೀಕೃತಗೊಂಡ ದಿನಾಂಕದಿಂದ 7 ದಿವಸಗಳ ಒಳಗಾಗಿ ಇತ್ಯರ್ಥಪಡಿಸತಕ್ಕದ್ದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು.

ಗೆ.

1. ಹಣಕಾಸು ನಿಯಂತ್ರಣಾಧಿಕಾರಿಗಳು, ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ, ಬೆಂಗಳೂರು
2. ಲೆಕ್ಕಾಧಿಕಾರಿಗಳು, ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ, ಬೆಂಗಳೂರು
3. ಎಲ್ಲಾ ಸಹಾಯಕ ಕಾರ್ಯದರ್ಶಿಗಳು, ಕೆ.ಐ.ಎ.ಡಿ.ಬಿ.
4. ಲೆಕ್ಕ ವಿಭಾಗ ಮತ್ತು ಆಂತರಿಕ ಲೆಕ್ಕ ಪರಿಶೋಧನಾ ಶಾಖೆಯ ಎಲ್ಲಾ ಸಿಬ್ಬಂದಿಗಳು.
5. ಕಛೇರಿ / ಕಡತ ಪ್ರತಿ.